# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 30-03-2021 ಪ್ರಶ್ನೆ ಸಂಖ್ಯೆ : 2092(2424)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 30-03-2021

ಉತ್ತರಿಸುವ ಸಚಿವರು: ಮಾನ್ಯ ಸಹಕಾರ ಸಚಿವರು

ವಿಷಯ : ಕೃಷಿ ಮಾರಾಟ ಇಲಾಖೆಯ ಅವರ್ತ ನಿಧಿ ಬಗ್ಗೆ

(ಅ) ಖರೀದಿ ಏಜೆನ್ಸಿಗಳು (Procurement Agencies) ಎಂದರೇನು; ಅವು ಯಾವುವು, ಕೃಷಿ ಮಾರಾಟ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಏಜೆನ್ಸಿಗಳು ಯಾವುವು; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಏಜೆನ್ಸಿಗಳು ಕೃಷಿ ಮಾರಾಟ ಇಲಾಖೆಯ ಅವರ್ತ ನಿಧಿ ಹಾಗೂ ಇತರೆ ನಿಧಿಗಳಿಂದ ಹಣ ಪಡೆಯಲು ಇರುವ ಮಾನದಂಡನೆಗಳೇನು; ಹಾಗೂ ಇರುವ ಮಾರ್ಗದರ್ಶಿ ಸೂತ್ರಗಳೇನು; (ವಿವರವಾದ ಮಾಹಿತಿ ನೀಡುವುದು)

(ಇ) ಕಾರವಾರ ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿ ಕೃಷಿ ಮಾರಾಟ ಇಲಾಖೆಯಿಂದ ಎಷ್ಟು ವರ್ಷಗಳಿಂದ ಈ ಏಜೆನ್ಸಿಗಳು ಅವರ್ತ ನಿಧಿ ಹಾಗೂ ಇತರೆ ನಿಧಿಗಳಿಂದ ಪಡೆದಿರುವ ಹಣವೆಷ್ಟು; ಹಾಲಿ ಬಾಕಿ ಇರುವ ಹಣವೆಷ್ಟು ಹಾಗೂ ಯಾವ ಉದ್ದೇಶಕ್ಕಾಗಿ ಹಣ ಪಡೆಯಲಾಗಿತ್ತು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) 2019-20 ಮತ್ತು 2020-21ರಲ್ಲಿ ಮಾರುಕಟ್ಟೆ ಸುಧಾರಣಾ ನಿಧಿಯಿಂದ ಕೃಷಿ ಉತ್ಪನ್ನಗಳ ಅಸೇಸಿಂಗ್ ಕಾರ್ಯಗಳಿಗಾಗಿ ಯಾವ ಕಾರ್ಯಕ್ರಮಗಳಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ? (ವಿವರವಾಗಿ ಏಜೆನ್ಸಿವಾರು, ಕಾರ್ಯಕ್ರಮವಾರು ಸಂಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು)